Total No. of Questions : 29 ] [ Total No. of Printed Pages : 4

Code No. : **205-K**

**Diploma in Physical Education**

# ವಿಷಯಾಧಾರಿತ ಬೋಧನಾ ಪದ್ಧತಿ — ಕನ್ನಡ

# CONTENT BASED METHODOLOGY OF TEACHING — KANNADA

Date : 03. 07. 2015 ]

Time : 2.00 P.M. to 5.00 P.M. ] [ Max. Marks : 80

***ಸೂಚನೆಗಳು :*** i) ಪ್ರಶ್ನೆ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿ.

ii) ಬರವಣಿಗೆ ಅಚ್ಚುಕಟ್ಟಾಗಿರಲಿ ಮತ್ತು ಅಂದವಾಗಿರಲಿ.

iii) ಸೂಚನೆಯಂತೆ ಉತ್ತರಿಸಿ ಮತ್ತು ಕಾಗದವನ್ನು ಅನವಶ್ಯಕವಾಗಿ ನಷ್ಟ ಮಾಡಬೇಡಿ.

## ಭಾಗ – I

I. ಈ ಕೆಳಗಿನವುಗಳಲ್ಲಿ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ತಲಾ ಎರಡು ಪುಟಗಳಿಗೆ ಮೀರದಂತೆ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಯ **ಅ** ಮತ್ತು **ಬ** ಉಪ–ಪ್ರಶ್ನೆಗಳನ್ನು ಕಡ್ಡಾಯವಾಗಿ ಉತ್ತರಿಸಬೇಕು : $4 \times 8 = 32$

1. ಅ) ಮಾತೃಭಾಷೆಯ ಅರ್ಥ ಮತ್ತು ಸ್ವರೂಪವನ್ನು ವಿಮರ್ಶಿಸಿ.

   ಬ) ಪ್ರಾಥಮಿಕ ಶಾಲೆಯಲ್ಲಿಯ ಮಾತೃಭಾಷೆಯ ಲಕ್ಷಣಗಳನ್ನು ಪಟ್ಟಿ ಮಾಡಿ. ಅವುಗಳಲ್ಲಿ ಮೂರನ್ನು ವಿವರಿಸಿ. 4 + 4

2. ಅ) ಭಾಷಾ ಬೋಧನೆಯಲ್ಲಿ ಮಕ್ಕಳಿಗೆ ಆಲಿಸುವ ಸಾಮರ್ಥ್ಯವನ್ನು ಬೆಳೆಸಬೇಕಾದ ಅಗತ್ಯವನ್ನು ಚರ್ಚಿಸಿ.

   ಬ) ಮಾತುಗಾರಿಕೆಯನ್ನು ಉತ್ತಮಪಡಿಸುವಲ್ಲಿ ಸಂಭಾಷಣೆಯ ಪಾತ್ರವೇನು ? 4 + 4

3. ಅ) ಓದುಗಾರಿಕೆ ಎಂದರೇನು ? ಅದರ ವಿಧಾನಗಳನ್ನು ಬರೆಯಿರಿ.

ಬ) ಶಿಕ್ಷಕರು ಮಕ್ಕಳಲ್ಲಿ ಸೃಜನಶೀಲತೆಯನ್ನು ಹೇಗೆ ಬೆಳೆಸುವರು ? 4 + 4

4. ಅ) ಪದ್ಯ ಬೋಧನೆಯ ಸಾಮಾನ್ಯ ಮತ್ತು ನಿರ್ದಿಷ್ಟ ಉದ್ದೇಶಗಳನ್ನು ಬರೆಯಿರಿ.

ಬ) ಪಾಠಯೋಜನೆಯು ಒಳಗೊಂಡಿರಬೇಕಾದ ಮುಖ್ಯಾಂಶಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಿ. 4 + 4

5. ಅ) ಪದ್ಯ ಬೋಧನೆಯ ಅರ್ಥ ಅದರ ಉದ್ದೇಶಗಳನ್ನು ಪಟ್ಟಿ ಮಾಡಿ. ಅವುಗಳಲ್ಲಿ ಮೂರನ್ನು ವಿವರಿಸಿ.

ಬ) ಮಕ್ಕಳಲ್ಲಿ ಅರ್ಥಗ್ರಹಣ ಸಾಮರ್ಥ್ಯ ಯಾವಾಗ ಬೆಳೆಸಲು ಸಾಧ್ಯವಾಗುತ್ತದೆ ? 4 + 4

6. ಅ) ಅಣುಬೋಧನಾ ಪಾಠದ ಯೋಜನೆಯನ್ನು ತಯಾರಿಸುವ ವಿವಿಧ ಹಂತಗಳನ್ನು ಪಟ್ಟಿ ಮಾಡಿ, ವಿವರಿಸಿ.

ಬ) ಗದ್ಯ ಬೋಧನೆಯ ವಿಧಾನಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಿ. 4 + 4

7. ಅ) ವ್ಯಾಕರಣ ಬೋಧನೆ ಎಂದರೇನು ? ವ್ಯಾಕರಣ ಬೋಧನೆಯ ಉದ್ದೇಶಗಳಾವುವು ?

ಬ) ಸುಂದರ ಬರಹದ ಪ್ರಯೋಜನಗಳನ್ನು ತಿಳಿಸಿ. 4 + 4

## ಭಾಗ – II

II. ಈ ಕೆಳಗಿನವುಗಳಲ್ಲಿ ಯಾವುದಾದರೂ **ಆರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಯ ಉತ್ತರವು ಒಂದೂವರೆ ಪುಟಗಳಿಗೆ ಮೀರದಿರಲಿ. 6 × 5 = 30

8. ಭಾಷಾ ಬೋಧನಾ ಶಿಕ್ಷಕನ ವೈಯಕ್ತಿಕ ಸಾಮರ್ಥ್ಯಗಳನ್ನು ವಿವರಿಸಿ.

9. ಉತ್ತಮ ಪಾಠ ಪುಸ್ತಕದ ಬಾಹ್ಯ ಗುಣಲಕ್ಷಣಗಳೇನು ?

10. ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ಬರಹ ಕಲಿಸುವ ವಿಧಾನಗಳಾವುವು ?

11. ಮುದ್ರಿತ ಸಂಪನ್ಮೂಲಗಳು ಭಾಷಾ ಕಲಿಕೆಯಲ್ಲಿ ಬಹಳ ಉಪಯುಕ್ತ ನಿರೂಪಿಸಿ.

12. ಕಪ್ಪು ಹಲಗೆ ಅತ್ಯುತ್ತಮ ಬೋಧನಾ ಸಾಧನ ನಿರೂಪಿಸಿ.

13. ಕ್ರೀಡಾ ವಿಧಾನ ಎಂದರೇನು ? ವಿಧಾನದ ಗುಣ ಮತ್ತು ಅವಗುಣಗಳನ್ನು ಬರೆಯಿರಿ.

14. ಸಮೂಹ ಮಾಧ್ಯಮಗಳನ್ನು ಭಾಷಾ ಕಲಿಕೆಗೆ ಪೂರಕವಾಗಿ ಬಳಸಿಕೊಳ್ಳಬಹುದೆ ? ನಿಮ್ಮ ಅಭಿಪ್ರಾಯವೇನು ?

15. ಮೌಲ್ಯಮಾಪನ ಎಂದರೇನು ? ಭಾಷಾ ಮೌಲ್ಯಮಾಪನದಲ್ಲಿ ಬಳಸುವ ವಿವಿಧ ಬಗೆಯ ಪ್ರಶ್ನೆಗಳನ್ನು ಉದಾಹರಣೆಯೊಂದಿಗೆ ವಿವರಿಸಿ.

## ಭಾಗ – III

III. ಈ ಕೆಳಗಿನವುಗಳಲ್ಲಿ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಯ ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ. $3 \times 3 = 9$

16. ಪ್ರಾಥಮಿಕ ಶಾಲಾ ಹಂತದಲ್ಲಿ ಕಂಠಪಾಠದ ಮಹತ್ತ್ವವನ್ನು ಕುರಿತು ಟಿಪ್ಪಣಿ ಬರೆಯಿರಿ.

17. ದೃಕ್ ಶ್ರವಣೋಪಕರಣಗಳ ವಿವಿಧ ಬಗೆಗಳಾವುವು ಸಂಕ್ಷಿಪ್ತವಾಗಿ ವಿವರಿಸಿ.

18. ಅನುಗಮನ ಪದ್ಧತಿ ವ್ಯಾಕರಣ ಬೋಧನೆಯಲ್ಲಿ ಪರಿಣಾಮಕಾರಿ ವಿಧಾನವೇ ? ನಿಮ್ಮ ಅನಿಸಿಕೆ ಏನು ?

19. ದಿನಚರಿ ಬರೆಯುವ ಅಭ್ಯಾಸ ಪ್ರತಿ ವ್ಯಕ್ತಿಗೆ ಹೇಗೆ ಸಹಾಯಕವಾಗಿದೆ ತಿಳಿಸಿ.

20. ವಾರ್ತಾ ಪತ್ರಿಕೆಗಳು ವಿದ್ಯಾರ್ಥಿಗಳ ಭಾಷಾ ಕಲಿಕೆಯಲ್ಲಿ ಹೇಗೆ ನೆರವಾಗುತ್ತವೆ ?

## ಭಾಗ – IV

IV. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ : $9 \times 1 = 9$

21. ಭಾಷಾ ಕಲಿಕೆ ತತ್ತ್ವಗಳಲ್ಲಿ ಎರಡನ್ನು ಹೆಸರಿಸಿ.

22. ಕಂಠಪಾಠ ಎಂದರೇನು ?

23. ವರ್ಣಮಾಲಾ ಪದ್ಧತಿ ಎಂದರೇನು ?

24. ನೈದಾನಿಕ ಪರೀಕ್ಷೆ ಎಂದರೇನು ?

25. ಶಬ್ದ ಭಂಡಾರ ಎಂದರೇನು ?

26. ಕ್ರಿಯಾತ್ಮಕ ವ್ಯಾಕರಣ ಎಂದರೇನು ?

27. ಮೌನ ಓದು ಎಂದರೇನು ?

28. ಅಖಂಡ ಪದ್ಧತಿ ಎಂದರೇನು ?

29. ಶ್ರವ್ಯ ಉಪಕರಣಗಳು ಎಂದರೇನು ?